ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/80/ಖಾಹುಮಾ/2014-15/ನೇ.ವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:06.07.2022.

# ಸುತ್ತೋಲೆ

ವಿಷಯ: ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1) ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ/157/ವೆಚ್ಚ-8/2020 ದಿ:10.06.2020 & ದಿನಾಂಕ:06.07.2020.
2) ಸರ್ಕಾರದ ಪತ್ರ ಸಂಖ್ಯೆ:ಇಡಿ/98/ಯುಪಿಸಿ/2020 ದಿನಾಂಕ:19.06.2020.
3) ಸರ್ಕಾರದ ಪತ್ರ ಸಂಖ್ಯೆ:ಇಡಿ/105/ಯುಪಿಸಿ/2020 ದಿ:29.07.2020.
4) ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ:04.12.2020.
5) ಆರ್ಥಿಕ ಇಲಾಖೆಯ ಅಧಿಕೃತ ಟಿಪ್ಪಣಿ ಸಂಖ್ಯೆ:ಆಎ/507/ವೆಚ್ಚ-8/2022, ದಿನಾಂಕ:23.06.2022.
6) ಸರ್ಕಾರದ ಪತ್ರ ಸಂಖ್ಯೆ:ಇಡಿ/57/ಯುಪಿಸಿ/2021(ಇ) (ಭಾಗ-1) ದಿ:28.06.2022.

** ** **

ಕೋವಿಡ್-19ರ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ತೀವ್ರ ಆರ್ಥಿಕ ಸಂಕಷ್ಟ ಸೃಷ್ಟಿಯಾಗಿದ್ದರಿಂದ ಉಲ್ಲೇಖ (1)ರ ಸುತ್ತೋಲೆಯಲ್ಲಿ ಆರ್ಥಿಕ ಇಲಾಖೆಯು ಮಿತವ್ಯಯ ಕ್ರಮಗಳನ್ನು ಜಾರಿಗೊಳಿಸಲಾಗಿತ್ತು ಹಾಗೂ ಈ ನಿಟ್ಟಿನಲ್ಲಿ ಉಲ್ಲೇಖ (2) & (3) ರ ಪತ್ರಗಳಲ್ಲಿ ಸರ್ಕಾರವು ಆರ್ಥಿಕ ಮಿತವ್ಯಯ ಕ್ರಮವನ್ನು ಕೈಗೊಂಡು ಖಾಲಿ ಇರುವ ಹುದ್ದೆಗಳನ್ನು 2020-21ನೇ ಸಾಲಿನಲ್ಲಿ ಭರ್ತಿ ಮಾಡುವಂತಿಲ್ಲ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಹೊಸದಾಗಿ ಸಹಮತಿ ನೀಡುವಂತಿಲ್ಲ. ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ. ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವಂತಿಲ್ಲ. ಈಗಾಗಲೇ ವೇತನಾನುದಾನಕ್ಕೆ ಒಳಪಡಿಸಲು ಸ್ವೀಕೃತಗೊಂಡಿರುವ ಎಲ್ಲಾ ಪ್ರಸ್ತಾವನೆಗಳನ್ನು 2020-21ನೇ ಸಾಲಿನಲ್ಲಿ ಹಾಗೂ ಮುಂದಿನ ಆದೇಶದವರೆಗೆ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಂತೆ ಹಾಗೂ ಆರ್ಥಿಕ ಇಲಾಖೆಯ/ಸರ್ಕಾರದ ಮುಂದಿನ ಆದೇಶದವರೆಗೆ ಪ್ರಸ್ತಾವನೆಯನ್ನು ಪರಿಗಣಿಸಬಾರದೆಂದು & ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಾರದೆಂದು ನಿರ್ದೇಶಿಸಿದ್ದರಿಂದ ಉಲ್ಲೇಖ (4) ರಲ್ಲಿ ಈ ಕಛೇರಿಯು ಸುತ್ತೋಲೆ ಹೊರಡಿಸಿ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜು, ಶಿಕ್ಷಣ ಮಹಾವಿದ್ಯಾಲಯ, ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಚಿತ್ರಕಲಾ ಕಾಲೇಜುಗಳಲ್ಲಿನ ಖಾಲಿ ಹುದ್ದೆ ಭರ್ತಿ, ಕಲ್ಯಾಣ-ಕರ್ನಾಟಕ ಭಾಗದ ಖಾಲಿ ಹುದ್ದೆಗಳ ನೇರ ನೇಮಕಾತಿ ಬಗ್ಗೆ ಹಾಗೂ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಪ್ರಸ್ತಾವನೆಗಳನ್ನು ಮುಂದಿನ ಆದೇಶದವರೆಗೆ ಈ ಕಛೇರಿಗೆ ಸಲ್ಲಿಸದಂತೆ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ನಿರ್ದೇಶಿಸಲಾಗಿತ್ತು.

ಪ್ರಸ್ತುತ ಉಲ್ಲೇಖ (5)ರ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿಯನ್ವಯ ಸರ್ಕಾರವು ಹೊರಡಿಸಿರುವ ಉಲ್ಲೇಖ (6)ರ ಪತ್ರದಲ್ಲಿ **"ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಇಲಾಖೆಯ ಹಂತದಲ್ಲಿ ವೇತನಾನುದಾನಕ್ಕೆ ಒಳಪಡಿಸಲು ಬಾಕಿ ಇರುವ ಪ್ರಸ್ತಾವನೆಗಳನ್ನು ಪರಿಗಣಿಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆ. ಅದರಂತೆ ದಿನಾಂಕ:31.12.2015 ರವರೆಗೆ ನಿವೃತ್ತಿ, ನಿಧನ, ರಾಜೀನಾಮೆ ಇತ್ಯಾದಿ ಕಾರಣಗಳಿಂದಾಗಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ತೆರವಾಗಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಮುಂದುವರೆಸಲು, ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ನೇಮಕಾತಿಯನ್ನು ಅನುಮೋದಿಸಲು ಪ್ರತಿಯೊಂದು ಕಾಲೇಜಿನ ಬಾಕಿ ಇರುವ ಹುದ್ದೆಗಳ ವಿವರಗಳು ಮತ್ತು ಅಭ್ಯರ್ಥಿಗಳ ನೇಮಕಾತಿಗೆ ಅಗತ್ಯವಿರುವ ಎಲ್ಲಾ ವಿವರವಾದ ದಾಖಲೆಗಳೊಂದಿಗೆ ಕಾಲೇಜುವಾರು ಪ್ರತ್ಯೇಕ**

ಪ್ರಸ್ತಾವನೆಗಳನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಕೋರಿದೆ. ಮುಂದುವರೆದು, ಇಲಾಖೆಯ ಹಂತದಲ್ಲಿ ವೇತನಾನುದಾನಕ್ಕೆ ಒಳಪಡಿಸಲು ಬಾಕಿ ಇರುವ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ" ನಿರ್ದೇಶಿಸಲಾಗಿದೆ.

ಆದ್ದರಿಂದ ಉಲ್ಲೇಖ (6) ರ ಸರ್ಕಾರದ ಪತ್ರದಲ್ಲಿ ನಿರ್ದೇಶಿಸಿರುವಂತೆ ದಿನಾಂಕ:31.12.2015 ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹಾಗೂ ವೇತನಾನುದಾನಕ್ಕೆ ಒಳಪಡಿಸಲು ನಿಯಮಾನುಸಾರ ಅವಕಾಶವಿರುವ ಪ್ರಸ್ತಾವನೆಗಳ ಬಗ್ಗೆ ತಮ್ಮ ಕಛೇರಿ ಹಂತದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ನಿಯಮಾನುಸಾರ ಅರ್ಹವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಮತ್ತು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಅನುಮತಿ ಕೋರಿ, ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಾಗ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಈ ಕೆಳಕಂಡ ಅಂಶಗಳ ಬಗ್ಗೆ ವೈಯುಕ್ತಿಕ ಗಮನಹರಿಸಿ, ಅದರಂತೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಂತರ ಸೂಕ್ತ ಶಿಫಾರಸ್ಸಿನೊಂದಿಗೆ (ಹಾಗೂ ಸಂಬಂಧಪಟ್ಟ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿ) ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ.

1) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014, ದಿನಾಂಕ:01.09.2017ರ ಪತ್ರದಲ್ಲಿ ವಿಧಿಸಿರುವ ಸಂಬಂಧಪಟ್ಟ ಎಲ್ಲಾ ಷರತ್ತುಗಳನ್ನು ಕಾಲೇಜು/ ಆಡಳಿತ ಮಂಡಳಿ ಪೂರೈಸಿರುವ/ಪೂರೈಸಿಲ್ಲದಿರುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳೊಂದಿಗೆ ಈ ಕಛೇರಿಗೆ ವರದಿ ನೀಡುವುದು.
2) ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹುದ್ದೆಗಳು ಹಸ್ತಾಂತರಗೊಂಡಿದ್ದಲ್ಲಿ, ಅಂತಹ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕಾರಣಕ್ಕೂ ಪ್ರಸ್ತಾವನೆ ಸಲ್ಲಿಸಬಾರದು.
3) ಬೇರೆ ಕಾಲೇಜುಗಳಿಗೆ ಮರು ಹಂಚಿಕೆ/ನಿಯೋಜನೆ ಹೊಂದಿರುವ ಬೋಧಕರ ಹುದ್ದೆಗಳಿಗೆದುರಾಗಿ ಖಾಲಿ ಹುದ್ದೆ ಇರುವುದಾಗಿ ಅಥವಾ ಅಂತಹ ಹುದ್ದೆಯನ್ನು ಭರ್ತಿ ಮಾಡಬಹುದಾಗಿರುತ್ತದೆ ಎಂಬ ಮಾಹಿತಿಯನ್ನು ನೀಡುವಂತಿಲ್ಲ.
4) ಸರ್ಕಾರದ ಆದೇಶ ಸಂಖ್ಯೆ: ಇಡಿ/357/ಯುಪಿಸಿ/2002 ದಿನಾಂಕ:19.12.2002 ರಲ್ಲಿ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ನಿಯಮಾನುಸಾರ ಆದ್ಯತೆಯ ಮೇರೆಗೆ ಭರ್ತಿ ಮಾಡಲು ಅಗತ್ಯ ಕ್ರಮ ವಹಿಸಿ, ನಂತರ ಮಂಜೂರಾದ ಅನುದಾನಿತ ಖಾಲಿ ಹುದ್ದೆಗಳಿದ್ದು, ನಿಗದಿತ ಅನುದಾನಿತ ಕಾರ್ಯಭಾರವಿದ್ದಲ್ಲಿ ಮಾತ್ರ (ಖಾಲಿ ಹುದ್ದೆ ಲಭ್ಯವಿರುವ ವಿಷಯದಲ್ಲಿ ನಿಗದಿತ 16/20 ಗಂಟೆಗಳ ಪೂರ್ಣ ಉಳಿಕೆ ಕಾರ್ಯಭಾರವಿದ್ದಲ್ಲಿ) ಅಂತಹ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.
5) ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಹುದ್ದೆ ಭರ್ತಿ ಮಾಡಲು ಈ ಕಛೇರಿಗೆ ಸಲ್ಲಿಸುವ ಪ್ರತಿಯೊಂದು ಕಾಲೇಜಿನ ಪ್ರತಿಯೊಂದು ವಿಷಯದ ಹುದ್ದೆಗೆ ಸಂಬಂಧಿಸಿದಂತೆ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಬಗ್ಗೆ ಪರಿಶೀಲಿಸಿ, ದೃಢೀಕೃತ ಮಾಹಿತಿ ನೀಡುವುದು (ಹುದ್ದೆಗಳು ಮಂಜೂರಾದ ಬಗ್ಗೆ & ಹುದ್ದೆಗಳು ಯಾವ ದಿನಾಂಕದಿಂದ, ಯಾರಿಂದ ಹಾಗೂ ಯಾವ ರೀತಿ ತೆರವಾಗಿದೆ ಎಂಬುದರ ಬಗ್ಗೆ ದೃಢೀಕೃತ ದಾಖಲಾತಿಗಳೊಂದಿಗೆ ಮಾಹಿತಿ ನೀಡುವುದು).
6) ಭರ್ತಿ ಮಾಡಬೇಕಾಗಿರುವ ಹುದ್ದೆಗಳ ಪ್ರತಿಯೊಂದು ವಿಷಯದಲ್ಲಿ ಚಾಲ್ತಿಯಲ್ಲಿನ ಶೈಕ್ಷಣಿಕ ಸಾಲಿನಲ್ಲಿರುವ ಅನುದಾನಿತ ಕಾರ್ಯಭಾರ, ಖಾಯಂ ಬೋಧಕರಿಗೆ ನಿಯಮಾನುಸಾರ ಹಂಚಿಕೆ ಮಾಡಿರುವ ಕಾರ್ಯಭಾರ ಹಾಗೂ ಉಳಿಕೆ ಕಾರ್ಯಭಾರ ಇವುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಡಬ್ಲ್ಯು & ಎಸ್ ನಮೂನೆಯಲ್ಲಿ ದೃಢೀಕೃತ ಮಾಹಿತಿ ನೀಡುವುದು (ಯಾವುದೇ ಕಾರಣಕ್ಕೂ ಅನುದಾನರಹಿತ ಕಾರ್ಯಭಾರವನ್ನು ಪರಿಗಣಿಸುವಂತಿಲ್ಲ) ಮತ್ತು ಸದರಿ ಹುದ್ದೆಗಳಿಗೆ ಈವರೆಗೂ ಪಾಲಿಸಿರುವ ಮೀಸಲಾತಿ, ನಿಯಮಾನುಸಾರ ಪಾಲಿಸಬೇಕಾಗಿದ್ದ ಮೀಸಲಾತಿ ಹಾಗೂ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ನಿಗಧಿಪಡಿಸಬೇಕಾಗಿರುವ ಮೀಸಲಾತಿ ಬಗ್ಗೆ ಮಾಹಿತಿ ನೀಡುವುದು (ಪ್ರತಿಯೊಂದು ವಿಷಯಕ್ಕೆ ಪ್ರತ್ಯೇಕವಾಗಿ ದೃಢೀಕೃತ ಮೀಸಲಾತಿ ವರದಿ ಪಟ್ಟಿ ಸಲ್ಲಿಸುವುದು).
7) ಮೀಸಲಾತಿಗೆ ಸಂಬಂಧಿಸಿದಂತೆ ಪ್ರತಿಯೊಂದು ವಿಷಯಕ್ಕೂ ಸದರಿ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಸಂಬಂಧಪಟ್ಟ ವಿಷಯದ ಮಂಜೂರಾದ ಹುದ್ದೆಗಳನ್ನು ಪರಿಗಣಿಸಿ, ಮೀಸಲಾತಿ ಬಗ್ಗೆ ಮಾಹಿತಿ ನೀಡುವುದು. (ಪ್ರತಿಯೊಂದು ವಿಷಯಕ್ಕೆ ಪ್ರತ್ಯೇಕವಾಗಿ ದೃಢೀಕೃತ ಮೀಸಲಾತಿ ವರದಿ ಪಟ್ಟಿ-Roster Chart ಸಲ್ಲಿಸುವುದು).

8) ಹೈದ್ರಾಬಾದ್-ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ, 371(ಜೆ) ನಿಯಮಗಳನ್ವಯ ಹುದ್ದೆಗಳನ್ನು ಹಂಚಿಕೆ ಮಾಡಿ ಮೀಸಲಾತಿ ನಿಗದಿಪಡಿಸಿ ಅನುಮೋದಿಸಿದ ನಂತರ ಅದರಂತೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

9) ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ ತಮ್ಮ ಕಛೇರಿ ಹಂತದಲ್ಲೇ ಆಡಳಿತ ಮಂಡಳಿಗಳ ಸಭೆ ನಡೆಸಿ, ಈ ಬಗ್ಗೆ ಯಾವ ರೀತಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಬೇಕು ಎಂಬುದರ ಬಗ್ಗೆ ಎಲ್ಲಾ ಆಡಳಿತ ಮಂಡಳಿಗೆ ಸೂಕ್ತ ಮಾರ್ಗದರ್ಶನ/ ನಿರ್ದೇಶನ ನೀಡುವುದು.

10) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಾಗ ಸರ್ಕಾರ, ಇಲಾಖೆ ಹಾಗೂ ಯು.ಜಿ.ಸಿ.ಯು ಕಾಲಕಾಲಕ್ಕೆ ಹೊರಡಿಸಿರುವ ಆದೇಶ ಹಾಗೂ ಸುತ್ತೋಲೆಗಳನ್ವಯ ನಿಯಮಾನುಸಾರ ಪರಿಶೀಲಿಸಿ, ತಮ್ಮ ಖಚಿತ ಅಭಿಪ್ರಾಯದೊಂದಿಗೆ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು. ಒಂದು ವೇಳೆ ಪ್ರಸ್ತಾವನೆಗಳನ್ನು ನಿಯಮಗಳನ್ವಯ ಪರಿಶೀಲಿಸದೇ ಅಥವಾ ಆಡಳಿತ ಮಂಡಳಿ ಸಲ್ಲಿಸುವ ಪ್ರಸ್ತಾವನೆಯನ್ನು ಯಥಾವತ್ತಾಗಿ ಮುಂದಿನ ಅಗತ್ಯ ಕ್ರಮಕ್ಕೆಂದು ಈ ಕಛೇರಿಗೆ ಸಲ್ಲಿಸಿದ್ದಲ್ಲಿ, ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಹಾಗೂ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

**"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

13.07.2022

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**ಇವರಿಗೆ:**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ & ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ,
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.

**ಪ್ರತಿಯನ್ನು:**

1. ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ
2. ಕಛೇರಿ ಪ್ರತಿ.

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿನಾಂಕ:31.12.2015ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಪಟ್ಟ ಮಾಹಿತಿ ಹಾಗೂ ದೃಢೀಕೃತ ದಾಖಲೆಗಳನ್ನು ಸಲ್ಲಿಸುತ್ತಿರುವ ಬಗ್ಗೆ

1 ಆಡಳಿತ ಮಂಡಳಿಯ ಹೆಸರು :

2 ಕಾಲೇಜಿನ ಹೆಸರು :

3 ವಿಷಯ :

## ಚೆಕ್‌ಲಿಸ್ಟ್

| ಕ್ರಮ ಸಂಖ್ಯೆ | ಪರಿಶೀಲಿಸಬೇಕಾದ ವಿವರಗಳು | ಪರಿಶೀಲಿಸಿ ಸಲ್ಲಿಸುತ್ತಿರುವ ಸಂಪೂರ್ಣ ಮಾಹಿತಿ ಮತ್ತು ವಿವರಗಳು |
|---|---|---|
| 1 | ಹುದ್ದೆಗಳು ಮಂಜೂರಾಗಿರುವ ಸರ್ಕಾರದ ಆದೇಶದ ಸಂಖ್ಯೆ & ದಿನಾಂಕ (ದೃಢೀಕೃತ ಆದೇಶದ ಪ್ರತಿ ಲಗತ್ತಿಸುವುದು) | ಸರ್ಕಾರದ ಆದೇಶ ಸಂಖ್ಯೆ:............................ ದಿನಾಂಕ:______ |
| 2 | ಮಂಜೂರಾಗಿರುವ ಹುದ್ದೆಗಳ ಪೈಕಿ ಪದವಿ-ಪೂರ್ವ ಶಿಕ್ಷಣ ಇಲಾಖೆಗೆ ಹಸ್ತಾಂತರಗೊಂಡ ಹುದ್ದೆಗಳ ಸಂಖ್ಯೆ (ದೃಢೀಕೃತ ಆದೇಶದ ಪ್ರತಿ ಲಗತ್ತಿಸುವುದು) | |
| 3 | ಪದವಿ-ಪೂರ್ವ ಶಿಕ್ಷಣ ಇಲಾಖೆಗೆ ಹಸ್ತಾಂತರಗೊಂಡ ನಂತರ ಉಳಿದಿರುವ ಮಂಜೂರಾದ ಹುದ್ದೆಗಳ ಸಂಖ್ಯೆ | |
| 4 | ಸರ್ಕಾರದ ಆದೇಶ ಸಂಖ್ಯೆ:ಇಡಿ/357/ಯುಪಿಸಿ/ 2002 ದಿನಾಂಕ:19.12.2002 ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳೆಂದು ಗುರುತಿಸಲಾಗಿದೆಯೇ? ಹಾಗಿದ್ದಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಕಾರ್ಯಭಾರಕ್ಕನುಗುಣವಾಗಿ ಉಳಿದಿರುವ ಖಾಲಿ ಹುದ್ದೆ ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆಯೇ? (ಮಾಹಿತಿ ನೀಡುವುದು) | |
| 5 | ಖಾಯಂ ಬೋಧಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ (ಖಾಲಿ ಹುದ್ದೆಗಳು ಯಾವ ದಿನಾಂಕದಂದು, ಯಾವ ರೀತಿ ಹಾಗೂ ಯಾರಿಂದ ತೆರವಾಗಿರುತ್ತದೆ ಎಂಬುದರ ಬಗ್ಗೆ ಸಂಪೂರ್ಣ ದೃಢೀಕೃತ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು ಮತ್ತು ಮಂಜೂರಾದ ಹುದ್ದೆ, ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಬಗ್ಗೆ ದೃಢೀಕೃತ ಪಟ್ಟಿ ಲಗತ್ತಿಸುವುದು) | |
| 6 | ಚಾಲ್ತಿಯಲ್ಲಿರುವ ಶೈಕ್ಷಣಿಕ ಸಾಲಿನ ಕಾರ್ಯಭಾರದ ಪಟ್ಟಿಯನ್ನು ನಿಯಮಾನುಸಾರ ಪರಿಶೀಲಿಸಿ ದೃಢೀಕರಿಸಿ ಲಗತ್ತಿಸಲಾಗಿದೆಯೇ? ಆ ಪ್ರಕಾರ ಖಾಯಂ ಬೋಧಕರಿಗೆ ನಿಯಮಾನುಸಾರ ಹಂಚಿಕೆ ಮಾಡಿರುವ ಹಾಗೂ ಉಳಿದಿರುವ ಅನುದಾನಿತ ಕಾರ್ಯಭಾರದ ಸಂಪೂರ್ಣ ವಿವರ | |
| 7 | ಈಗ ಭರ್ತಿ ಮಾಡಬೇಕಾಗಿರುವ ಖಾಲಿ ಹುದ್ದೆಯನ್ನು ಯಾರಿಂದ ತೆರವಾದ ಹುದ್ದೆಗೆದುರಾಗಿ ಭರ್ತಿ ಮಾಡಬಹುದಾಗಿರುತ್ತದೆ ಹಾಗೂ ಆ ಖಾಲಿ ಹುದ್ದೆಗೆ ಉಳಿದಿರುವ ಅನುದಾನಿತ ಕಾರ್ಯಭಾರ (ಖಾಲಿ ಹುದ್ದೆ ಲಭ್ಯವಿರುವ ವಿಷಯದಲ್ಲಿ ನಿಗದಿತ 16/20 ಗಂಟೆಗಳ | |

| | | |
|---|---|---|
| | ಪೂರ್ಣಕಾಲಿಕ ಉಳಿಕೆ ಕಾರ್ಯಭಾರವಿರುವ ಬಗ್ಗೆ ಪರಿಶೀಲಿಸಿ ನಂತರ ಖಾಲಿ ಹುದ್ದೆ ಭರ್ತಿ ಬಗ್ಗೆ ಪ್ರಸ್ತಾವನೆ ಸಲ್ಲಿಸುವುದು). | |
| 8 | ವಿಷಯವಾರು ಪ್ರತ್ಯೇಕವಾಗಿ ಮೀಸಲಾತಿ ವರದಿ ಪಟ್ಟಿ ಲಗತ್ತಿಸಲಾಗಿದೆಯೇ? ಹಾಗೂ ಆ ಪ್ರಕಾರ ಖಾಲಿ ಇರುವ ಹುದ್ದೆಗೆ ನಿಗಧಿಪಡಿಸಬೇಕಾಗಿರುವ ಮೀಸಲಾತಿ ಬಗ್ಗೆ ಮಾಹಿತಿ ನೀಡುವುದು. (Roster Chart) ಲಗತ್ತಿಸುವುದು. | |
| 9 | ಆಡಳಿತ ಮಂಡಳಿಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರ, ಇಲಾಖೆ ಹಾಗೂ ಯು.ಜಿ.ಸಿ. ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳ ಪ್ರಕಾರ ಪ್ರಾದೇಶಿಕ ಜಂಟಿ ನಿರ್ದೇಶಕರ ಹಂತದಲ್ಲಿ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲಾಗಿದೆಯೇ? | |
| 10 | ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ ಸರ್ಕಾರದ ದಿನಾಂಕ:01.09.2017ರ ಪತ್ರದಲ್ಲಿ ನೀಡಿರುವ ಷರತ್ತುಗಳ ಪ್ರಕಾರ ಮತ್ತು ಕೇಂದ್ರ ಕಛೇರಿಯ ದಿನಾಂಕ:06.07.2022ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವುದು. | |

ಸಹಿ/-

ಪ್ರಾದೇಶಿಕ ಜಂಟಿ ನಿರ್ದೇಶಕರು